5 ● RF(A)/100/3339

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]

Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 25 ]

Total No. of Questions : 25 ]

ಸಂಕೇತ ಸಂಖ್ಯೆ : **28-K**

**Code No. : 28-K**

# A

**CCE RF**
**UNREVISED**
**FULL SYLLABUS**

**Question Paper Serial No. 100**

# ವಿಷಯ : ಹಿಂದೂಸ್ಥಾನಿ ಸಂಗೀತ – ಶಾಸ್ತ್ರ ವಿಭಾಗ

# Subject : HINDUSTANI MUSIC – THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / Regular Fresh)**

ದಿನಾಂಕ : 10. 04. 2023 ] [ Date : 10. 04. 2023

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

*ಪರೀಕ್ಷಾರ್ಥಿ ಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I.** ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ : **8 × 1 = 8**

1. ಕರ್ನಾಟಕ ಸಂಗೀತ ಮತ್ತು ಹಿಂದೂಸ್ಥಾನಿ ಸಂಗೀತದ ಎರಡೂ ಪ್ರಕಾರಗಳಲ್ಲಿ ಬಳಕೆಯಲ್ಲಿರುವ ಶ್ರುತಿ ವಾದ್ಯ

   (A) ತಬಲ

   (B) ಮೃದಂಗ

   (C) ತಂಬೂರಿ

   (D) ಕೊಳಲು

2. ಏಳು ಸ್ವರಗಳ ಸಮೂಹವೇ

   (A) ನಾದ

   (B) ಶೃತಿ

   (C) ಥಾಟ್

   (D) ಸಪ್ತಕ

3. ರಾಗದ ಪ್ರಮುಖ ಸ್ವರವೇ

(A) ವಾದಿ

(B) ಸಂವಾದಿ

(C) ವಿವಾದಿ

(D) ಅನುವಾದಿ

4. ದೇಸ್ ರಾಗದ ಥಾಟ್

(A) ಭೈರವಿ

(B) ಖಮಾಜ್

(C) ಕಲ್ಯಾಣಿ

(D) ಅಸಾವರಿ

5. ಭೈರವ ರಾಗದ ಗಾಯನ ಸಮಯ

(A) ರಾತ್ರಿಯ ಮೊದಲನೆಯ ಪ್ರಹರ

(B) ಬೆಳಗಿನ ಮೊದನೆಯ ಪ್ರಹರ

(C) ಹಗಲಿನ ಎರಡನೆಯ ಪ್ರಹರ

(D) ರಾತ್ರಿಯ ಎರಡನೆಯ ಪ್ರಹರ

6. ಪಂಡಿತ ವಿಷ್ಣು ನಾರಾಯಣ ಭಾತಖಂಡೆಯವರ ಜನ್ಮಸ್ಥಳ

(A) ಕಲ್ಕತ್ತಾ

(B) ಧಾರವಾಡ

(C) ಮುಂಬಯಿ

(D) ಯಲಿವಾಳ

7. ಹಿಂದೂಸ್ಥಾನಿ ಸಂಗೀತವನ್ನು 'ಉತ್ತರಾದಿ ಸಂಗೀತ' ಎಂದು ಕರೆಯುತ್ತಾರೆ. ಏಕೆಂದರೆ ಅದು

(A) ದಕ್ಷಿಣ ಭಾರತದಲ್ಲಿ ಬೆಳೆದು ಬಂದಿದೆ

(B) ಪ್ರಪಂಚದ ಉತ್ತರದಲ್ಲಿ ಬೆಳೆದು ಬಂದಿದೆ

(C) ಉತ್ತರ ಭಾರತದಲ್ಲಿ ಬೆಳೆದು ಬಂದಿದೆ

(D) ಪ್ರಪಂಚದ ದಕ್ಷಿಣದಲ್ಲಿ ಬೆಳೆದು ಬಂದಿದೆ

8. ಭೈರವಿ ರಾಗವನ್ನು ಸಂಪೂರ್ಣ ರಾಗವೆಂದು ಕರೆಯಲು ಕಾರಣ, ಈ ರಾಗದ ಆರೋಹಣ ಮತ್ತು ಅವರೋಹಣದಲ್ಲಿರುವ ಸ್ವರಗಳು

(A) 7 - 7

(B) 5 - 6

(C) 6 - 6

(D) 5 - 5

**II.** ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರಿಸಿ : **8 × 1 = 8**

9. ಲಕ್ಷಣಗೀತೆಯನ್ನು ವ್ಯಾಖ್ಯಾನಿಸಿ.

10. ತೀನ್‌ತಾಳದಲ್ಲಿ ಬರುವ ಒಟ್ಟು ಮಾತ್ರಾಗಳ ಸಂಖ್ಯೆ ಎಷ್ಟು ?

11. ಕರ್ನಾಟಕದಲ್ಲಿ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ ಬೆಳೆದು ಬರಲು ಕಾರಣವೇನು ?

12. ಸ್ಥಾಯಿ ಮತ್ತು ಅಂತರಾಕ್ಕಿರುವ ಒಂದು ವ್ಯತ್ಯಾಸವನ್ನು ಬರೆಯಿರಿ.

13. ಬೃಂದಾವನಿ ಸಾರಂಗ ರಾಗದ ಆರೋಹಣ ಮತ್ತು ಅವರೋಹಣದಲ್ಲಿ ಕಂಡುಬರುವ ಒಂದು ಸ್ವರ ವ್ಯತ್ಯಾಸವನ್ನು ತಿಳಿಸಿ.

14. ಸ್ವರಲಿಪಿಯಲ್ಲಿ 'ಮ' ಸ್ವರದ ಮೇಲೆ ಒಂದು ಚಿಕ್ಕ ಲಂಬ ಗೆರೆಯನ್ನು ಕೊಡಲಾಗುವುದು. ಏಕೆ ?

15. ಪಂಡಿತ ವಿಷ್ಣು ದಿಗಂಬರ ಪಲುಸ್ಕರ್ ಅವರು ಬಾಲ್ಯದಲ್ಲಿ ದೃಷ್ಟಿ ಹೀನರಾಗಲು ಕಾರಣವೇನು ?

16. ಬಿಬಾಸ್ ರಾಗವನ್ನು ಉತ್ತರಾಂಗ ಪ್ರಧಾನ ರಾಗವೆಂದು ಕರೆಯಲು ಕಾರಣವೇನು ?

**III.** ಕೆಳಗಿನ ಪ್ರಶ್ನೆಗಳಿಗೆ *ಎರಡರಿಂದ ಮೂರು* ವಾಕ್ಯಗಳಲ್ಲಿ ಉತ್ತರಿಸಿ : **7 × 2 = 14**

17. ಭೂಪಾಲಿ ಮತ್ತು ದುರ್ಗಾ ರಾಗದಲ್ಲಿ ಕಂಡುಬರುವ ಒಂದು ಸಾಮ್ಯತೆ ಮತ್ತು ವ್ಯತ್ಯಾಸ ತಿಳಿಸಿ.

18. ಛೋಟಾ ಖಯಾಲ್‌ಗೂ ಮತ್ತು ಧೃಪದ್‌ಗಿರುವ ಒಂದು ವ್ಯತ್ಯಾಸವನ್ನು ತಿಳಿಸಿ.

19. ಸಂಗೀತವನ್ನು ಶ್ರವಣ ಸಾಧನ ವಿದ್ಯೆಯೆಂದು ಕರೆಯಲು ಕಾರಣವೇನು ?

20. ಪುರಂದರದಾಸರನ್ನು ಕರ್ನಾಟಕ ಶಾಸ್ತ್ರೀಯ ಸಂಗೀತದ ಪಿತಾಮಹ ಎಂದು ಕರೆಯಲು ಕಾರಣವೇನು ?

21. ಈ ಕೆಳಗಿನ ರಾಗಗಳನ್ನು ಕರ್ನಾಟಕ ಮತ್ತು ಹಿಂದೂಸ್ಥಾನಿ ರಾಗಗಳಾಗಿ ವರ್ಗೀಕರಣ ಮಾಡಿ ಬರೆಯಿರಿ :

    ಮಾಲ್‌ಕೌನ್ಸ್, ಹಿಂದೋಳ, ಮಾಯಾಮಾಳವಗೌಳ, ಭೈರವ.

22. ಮಾಲ್‌ಕೌನ್ಸ್ ರಾಗವು ಭೈರವಿ ರಾಗಕ್ಕಿಂತ ಭಿನ್ನವಾಗಿದೆ. ಹೇಗೆ ?

23. ಲಕ್ಷಣಗೀತೆಯು, ಸ್ವರಗೀತೆಗಿಂತ ಭಿನ್ನವಾಗಿದೆ. ಹೇಗೆ ?

**IV.** ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :

24. ತಂತಿವಾದ್ಯಗಳು, ಅವನದ್ಧ ವಾದ್ಯಗಳಿಗಿಂತ ಭಿನ್ನ. ಹೇಗೆ ? ಕೆಳಗೆ ಕೊಟ್ಟಿರುವ ವಾದ್ಯಗಳನ್ನು ತಂತಿ, ಸುಷಿರ, ಅವನದ್ಧ ಮತ್ತು ಘನವಾದ್ಯಗಳಾಗಿ ವರ್ಗೀ ಕರಣ ಮಾಡಿ.

    ತಬಲ, ಸಿತಾರ್, ಕೊಳಲು, ತಾಳ. **6**

25. ಭೂಪಾಲಿ ರಾಗದ ಸ್ವರಗೀತೆಯನ್ನು ಲಿಪಿಬದ್ಧಗೊಳಿಸಿ. **4**

5 ● RF(A)/100/3339

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 4 ]

Total No. of Printed Pages : 4 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 6 ]

Total No. of Questions : 6 ]

ಸಂಕೇತ ಸಂಖ್ಯೆ : **28-K**

**Code No. : 28-K**

# A

**CCE RF**
**UNREVISED**
**FULL SYLLABUS**

**Question Paper Serial No. 100**

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

## ವಿಷಯ : ಹಿಂದೂಸ್ಥಾನಿ ಸಂಗೀತ – ಪ್ರಾಯೋಗಿಕ ವಿಭಾಗ

## Subject : HINDUSTANI MUSIC — PRACTICAL

(ಕನ್ನಡ ಮಾಧ್ಯಮ / **Kannada Medium**)

(ಶಾಲಾ ಅಭ್ಯರ್ಥಿ / **Regular Fresh**)

ದಿನಾಂಕ : 10. 04. 2023 ] [ Date : 10. 04. 2023

ಸಮಯ : 1 ಗಂಟೆ 30 ನಿಮಿಷಗಳು ] [ Time : 1 hour 30 minutes

ಗರಿಷ್ಠ ಅಂಕಗಳು : 40 ] [ Max. Marks : 40

*ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು 6 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

ಪರೀಕ್ಷಕರು ಈ ಕೆಳಗಿನ ಪ್ರಶ್ನೆಗಳನ್ನು ವಿದ್ಯಾರ್ಥಿ  ಗಳಿಗೆ ಕೇಳುವುದು :

1. ಸರಳೆ ಸ್ವರಗಳನ್ನು ಯಾವ ರಾಗದಲ್ಲಿ ಹಾಡಲಾಗುತ್ತದೆ ? ನಿಮ್ಮ ಪಠ್ಯಕ್ರಮದ ಒಂದು ಸರಳೆ ಸ್ವರವನ್ನು ಹಾಡುವುದು. 8

2. ಸ್ವರಗೀತೆ ಮತ್ತು ಲಕ್ಷಣಗೀತೆ ನಡುವಿನ ವ್ಯತ್ಯಾಸವೇನು ? ಬಾಗೇಶ್ರೀ ರಾಗದ ಸ್ವರಗೀತೆಯನ್ನು ಹಾಡುವುದು. 6

3. ಲಕ್ಷಣಗೀತೆಯು ಸಂಗೀತಗಾರರಿಗೆ ಉಪಯೋಗಕಾರಿ ಹೇಗೆ ? ನಿಮ್ಮ ಪಠ್ಯಕ್ರಮದ ಒಂದು ಲಕ್ಷಣಗೀತೆಯನ್ನು ಹಾಡುವುದು. 6

4. ಛೋಟಾ ಖಯಾಲ್ ಗಾಯನವು ಧ್ರುಪದ್ ಗಾಯನಕ್ಕಿಂತ ಭಿನ್ನ ಹೇಗೆ ? ನಿಮ್ಮ ಪಠ್ಯಕ್ರಮದ ಒಂದು ಛೋಟಾ ಖಮಾಲನ್ನು ಹಾಡುವುದು. 10

5. ಧೃತ್ ಏಕತಾಲ ಮತ್ತು ಚೌತಾಲಗಳ ನಡುವಿನ ವ್ಯತ್ಯಾಸವೇನು ? ಧೃತ್ ಏಕತಾಳದ ಮಾಹಿತಿಯನ್ನು ಹೇಳುವುದು, ತಾಳವನ್ನು ಕೈಯಲ್ಲಿ ಹಾಕಿ ತೋರಿಸುವುದು. 6

6. ಧ್ರುಪದ್ ಗೀತೆಯನ್ನು ಠಾಯ್ ದುಗುನ್ ಮತ್ತು ಚೌಗುನ್ ಲಯದಲ್ಲಿ ಹಾಡುವುದು. 4